ಕೋಣೆಗೆ ಹೋದರು. ಅಲ್ಲಿ ನಿಧಿ ಮತ್ತು ನಿವೇದಿತಾ ಇಬ್ಬರೂ ಅವರಿಗೆ ಕಾಣಿಸಲಿಲ್ಲ. ವೀಣಮ್ಮ ಮಗಳನ್ನು ಕೂಗಿ ಕರೆದಾಗಲೂ ಯಾವ ಪ್ರತಿಕ್ರಿಯೆ ಬಾರಲಿಲ್ಲ. ಅವರು ಆತಂಕಗೊಂಡು ಕೆಳಗೆ ಬಂದು ಅಳಿಯನಿಗೆ ವಿಷಯ ವಿವರಿಸಿದರು. ಆಗ ಅಲ್ಲಿ ನೆರೆದವರಿಗೆಲ್ಲಾ ಆತಂಕ ಶುರುವಿಟ್ಟುಕೊಂಡಿತು. ಪ್ರದೀಪ ಪ್ರಭಾವತಿಯನ್ನು ಕರೆದು ನಿವಿಯ ಬಗ್ಗೆ ವಿಚಾರಿಸಿದಾಗ ಆಕೆಯಲ್ಲೂ ಉತ್ತರವಿರಲಿಲ್ಲ.

'ನನ್ನನ್ನು ಹೊರಗೆ ಕಳಿಸಿದರು ಸರ್. ಕರೀತೀನಿ ಅಂದ್ರು. ನಿಮ್ಮ ರಿಲೇಟಿವ್ಸ್‌ಗೆ ಉಪಾಹಾರ ತಯಾರಿಸಲು ಕಿಚನ್‌ಗೆ ಬಂದೆ' ಪೆಚ್ಚು ಮೋರೆ ಹಾಕಿ ನುಡಿದಳು. ಪ್ರದೀಪ ಟೆರೇಸ್‌ನ ಬಾಗಿಲು ಮುಚ್ಚಿರುವುದನ್ನು ಗಮನಿಸಿ ಅದನ್ನು ಎಳೆಯಲು ನೋಡಿದಾಗ ಅದು ತೆರೆದುಕೊಳ್ಳಲಿಲ್ಲ. ನಿವಿ ಆಚೆಯಿಂದ ಅಗುಳಿ ಹಾಕಿಕೊಂಡಿರುವುದು ಅವನಿಗೆ ಖಾತ್ರಿಯಾಗಿ, 'ನಿವಿ, ಏನಿದು ಹುಡುಗಾಟಿಕೆ. ಯಾಕೆ ಹೀಗೆ ವರ್ತಿಸುತ್ತಿದ್ದೀಯಾ? ಬಾಗಿಲು ತೆಗಿ' ಎಂದ ಮೃದುವಾಗಿ.

ಅತ್ತಲಿಂದ ಯಾವ ಪ್ರತಿಕ್ರಿಯೆನೂ ಬರಲಿಲ್ಲ. ಅವಳು ಬಚ್ಚಲಿನ ಕೋಣೆಯಲ್ಲೂ ಒಮ್ಮೆ ಹೀಗೆ ಮಗುವಿನೊಡನೆ ಬಂಧಿಯಾಗಿ ಕುಳಿತದ್ದು ನೆನಪಾಯಿತು. ಆಗಲೂ ಅವಳು ತನಗಾಗಲೀ, ಮಗುವಿಗಾಗಲಿ ಯಾವ ಹಾನಿಯೂ ಮಾಡಿಕೊಳ್ಳದೇ ಇದ್ದುದ್ದನ್ನು ಸ್ಮರಿಸಿ ತನಗೆ ತಾನೇ ಸಮಾಧಾನ ಮಾಡಿಕೊಂಡ. ಅವನು ಅಲ್ಲಿಂದ ಮಹಡಿ ಮೆಟ್ಟಲುಗಳನ್ನಿಳಿದು ಬಂದಾಗ ಕೃತ್ತಿಕಾ ಎದುರಾದಳು, 'ಅವ್ಳು ಟೆರೇಸ್‌ಗೆ ಹೋಗಿ ಬಾಗಿಲು ಲಾಕ್ ಮಾಡಿಕೊಂಡು ಕೂತಿದ್ದಾಳಾ? ನಮ್ಮನ್ನು ಮಾತನಾಡಿಸಲು ಇಷ್ಟ ಇಲ್ಲವೆಂದು ಸ್ಪಷ್ಟವಾಯಿತು. ಪರವಾಗಿಲ್ಲ. ಅವಳಿಗೆ ನಮ್ಮ ಬಗ್ಗೆ ಇರುವ ಭಾವನೆ ಅರಿವಿದ್ದೂ ನಾವಿಲ್ಲಿಗೆ ಬಂದದ್ದು ತಪ್ಪು. ವೀಣಕ್ಕನ ಒತ್ತಾಯಕ್ಕೆ ಬರಬೇಕಾಯಿತು' ಎಂದಳು ಸ್ವಲ್ಪ ಬೇಸರದ ಸ್ವರದಲ್ಲಿ.

'ಕೃತ್ತಿಕಾ, ಪ್ಲೀಸ್. ಅರ್ಥ ಮಾಡಿಕೊಳ್ಳಿ. ಅವಳು ಯಾಕೆ ಹಾಗೆ ಆಡುತ್ತಿದ್ದಾಳೆ ಎಂದು ನನಗೇ ಗೊತ್ತಾಗುತ್ತಿಲ್ಲ. ನನಗೆ ಮುಜುಗರವಾಗುತ್ತಿದೆ. ನಾನು ಏನೂ ಮಾಡುವ ಸ್ಥಿತಿಯಲಿಲ್ಲ' ಪ್ರದೀಪ ಅಸಹಾಯಕತೆ ವ್ಯಕ್ತಪಡಿಸಿದ.

'ಪರವಾಗಿಲ್ಲ. ನಾವು ಹೊರಡ್ತೇವೆ. ಆಮೇಲೆ ಅವಳು ಇನ್ನೇನಾದರೂ ಅನಾಹುತ ಮಾಡಿಕೊಂಡರೆ ಕಷ್ಟ. ಅದಕ್ಕೂ ಕಡೆಗೆ ನಾವೇ ಹೊಣೆಗಾರರಾಗುತ್ತೇವೆ' ಎಂದಳು ಕಹಿದನಿಯಲ್ಲಿ. ಇಬ್ಬರೂ ಮೆಟ್ಟಲಿಳಿಯುತ್ತಾ ಬಂದಾಗ ಕೃತ್ತಿಕಾ ನುಡಿದಳು, 'ಅವಳಿಗೆ ಮಗಳು ಹುಟ್ಟಿದ ಮೇಲೆ ತಾನೇ ಅವಳ ವರ್ತನೆಯಲ್ಲಿ ಬದಲಾವಣೆ? ನಿಮ್ಗೆ ಗೊತ್ತಾ ಭಾವ? ಚಿಕ್ಕವಳಿದ್ದಾಗ ನಾನೊಂದು ಸಲ ಅವಳ ಮನೆಗೆ ಹೋದಾಗ ಗಮನಿಸಿದ್ದು. ಅವಳ ಆಟದ ಸಾಮಾನುಗಳಲ್ಲಿ ತುಂಬಾ ಗೊಂಬೆಗಳಿದ್ದವಲ್ಲ. ಅವುಗಳಲ್ಲಿ ಈ ಗಾಡಿಗಳು, ಪ್ರಾಣಿ ಪಕ್ಷಿಗಳದ್ದೆಲ್ಲಾ ಸರಿಯಾಗೇ ಇರುತ್ತಿದ್ದವು. ಅದರಲ್ಲೂ ಒಂದು ಹುಲಿಯ ಗೊಂಬೆಯನ್ನು ಅವಳು ಎಷ್ಟು ಜೋಪಾನ ಮಾಡಿಕೊಂಡಿದ್ದಳೆಂದರೆ ಅದು ಈಗಲೂ ಅವಳ ಮನೇಲಿದೆ. ಆಕೆಗೆ ಅದು ಯಾಕೆ ಇಷ್ಟವೋ. ಇವತ್ತಿಗೂ ನನಗೆ ಆಶ್ಚರ್ಯ! ಆ ಹುಲಿಯ ಕಾಲಿನ ಉಗುರುಗಳಿಗೆಲ್ಲಾ ಕೆಂಪು ನೇಲ್ ಪಾಲಿಶ್ ಹಚ್ಚಿಟ್ಟಿದ್ದಳು. ಆದರೆ ಈ ಅಂದದ ಹೆಣ್ಣು ಮಗುವಿನ ಬಾರ್ಬಿಯಂಥ ಗೊಂಬೆಗಳು ಇವೆಯಲ್ಲಾ, ಅವನ್ನು ಅವಳು ಹಾಳು ಮಾಡಿಡುತ್ತಿದ್ದಳು. ಅವುಗಳನ್ನು ಅಂದವಾಗಿರಲು ಬಿಡುತ್ತಿರಲಿಲ್ಲ. ಅವುಗಳ ಸ್ವರೂಪವೇ ಗೊತ್ತಾಗದಷ್ಟು ಬಟ್ಟೆ, ಮುಖ, ಕೂದಲು ಎಲ್ಲವನ್ನೂ ವಿರೂಪಗೊಳಿಸುತ್ತಿದ್ದಳು. ನನ್ನ ಬಳಿಯೂ ಅವಳೆಂದೂ ಮುಕ್ತವಾಗಿ ಮಾತನಾಡುತ್ತಿರಲಿಲ್ಲ. ಒಮ್ಮೆ...' ಎಂದು ಹೇಳಿ ಮಾತು ನಿಲ್ಲಿಸಿದಳು.

ತಿಳಿಸಲೋ ಬೇಡವೋ ಎಂಬ ಅಳುಕು ಅವಳ ದನಿಯಲ್ಲಿ ಸ್ಪಷ್ಟವಾಗಿತ್ತು. ಪ್ರದೀಪ ಆಕೆ ಹೇಳಲು ಅಳುಕುತ್ತಿದ್ದ ಮಾತನ್ನು ತಿಳಿಯುವ ಕುತೂಹಲದಿಂದ, 'ಪ್ಲೀಸ್ ಹೇಳಿ. ನೀವು ಹೇಳಿದರೆ ನಿವಿಯನ್ನು ಅರ್ಥಮಾಡಿಕೊಳ್ಳಲು ನನಗೆ ಸಹಾಯವಾಗುತ್ತದೆ' ಎಂದು ಆಗ್ರಹಿಸಿದ.

ಕೃತ್ತಿಕಾ, 'ನನ್ನ ಕಂಡರೇನೇ ನಿವೇದಿತಾಳಿಗೆ ಆಗಿ ಬರುತ್ತಿರಲಿಲ್ಲ' ಎಂದಳು. ಮಾತು ಅಷ್ಟೇ ಅಲ್ಲವೆಂದು ಅವನಿಗೂ ತಿಳಿದಿತ್ತು. ಅವನು ಗಂಭೀರವಾಗಿ ಅವಳ ಮುಖ ದಿಟ್ಟಿಸಿದಾಗ ಕೃತ್ತಿಕಾ ಸೋತು, 'ನಿವಿ ಒಮ್ಮೆ ನನ್ನನ್ನು ಮೆಟ್ಟಲಿನಿಂದ ಕೆಳಗೆ ತಳ್ಳಿದ್ದಳು. ನನ್ನ ಬಟ್ಟೆಗಳನ್ನು ಹರಿದಿಟ್ಟಿದ್ದಳು. ನನ್ನ ಮುಖವನ್ನು ಪರಚಿಟ್ಟಿದ್ದಳು. ಒಮ್ಮೆ ನನ್ನ ಪುಸ್ತಕಗಳಿಗೆ ಬೆಂಕಿಯೂ ಕೊಟ್ಟಿದ್ದಳು. ಆಗಿನಿಂದ ನಾನು ಅವಳಿಂದ ದೂರವೇ ಉಳಿದಿದ್ದೆ. ಈಗಲೂ ನನ್ನ ಕಂಡರೆ ಏಕೆ ಆಗುವುದಿಲ್ಲವೋ ನನಗೆ ಅರ್ಥವೇ ಆಗುತ್ತಿಲ್ಲ. ಈಗಲೂ ಮಾತನಾಡಿಸೋಣವೆಂದು ಕೋಣೆಗೆ ಬಂದಾಗ ಗೆಟ್ ಔಟ್ ಅನ್ನುವ ಥರ ವರ್ತಿಸಿದಳು. ಈ ವಿಯರ್ಡ್ ಬಿಹೇವಿಯರ್ ಬಗ್ಗೆ ನನಗೆ ಸ್ಪಷ್ಟನೆ ಇದುವರೆಗೂ ಸಿಕ್ಕಿಲ್ಲ. ನನ್ನ ಬಗ್ಗೆ ಅವಳಿಗೇಕೆ ದ್ವೇಷವೆಂದು ಇವತ್ತಿಗೂ ಕಾರಣ ಹುಡುಕುತ್ತೇನೆ. ಅವಳು ನನ್ನ ಅಕ್ಕ. ಅವಳ ಬಳಿ ಮುಕ್ತವಾಗಿ ಮಾತನಾಡಬೇಕು, ನಗಬೇಕು, ಜೊತೆಗೆ ತಿರುಗಾಡಬೇಕು ಎಂದೆಲ್ಲಾ ತುಂಬಾ ಆಸೆ ಇದೆ ನನಗೆ. ಅವಳೇಕೋ ನಮ್ಮಿಬ್ಬರ ನಡುವೆ ಒಂದು ಬೇಲಿ ಹಾಕಿಕೊಂಡು ಬಿಟ್ಟಿದ್ದಾಳೆ. ಯಾವ ಈಗೋನೂ ಇಟ್ಟುಕೊಳ್ಳದೆ ನಾನು ಅದನ್ನು ದಾಟಿ ಬರಲು ಸಿದ್ಧ. ಆದರೆ ಅವಳಿಗೆ ಆ ಬೇಲಿಯೊಳಗೇ ಇರಲು ಆಸೆ. ನಾವು ಎಷ್ಟೇ ಅದನ್ನು ಸರಿಸಲು ಪ್ರಯತ್ನಿಸಿದರೂ ಅವಳು ಹತ್ತಿರ ಹೋಗಲು ಆಸ್ಪದವೇ ನೀಡುತ್ತಿಲ್ಲ. ಈಗ ನೀವೇ ನೋಡಿದಿರಲ್ಲಾ, ಈಗ ನಾನು ದುಬೈಗೆ ಹೊರಟುಹೋದರೆ ಇನ್ನು ಬರುವುದು ಯಾವಾಗಲೋ' ಎಂದಳು ದುಗುಡದಿಂದ.

ಅದನ್ನೆಲ್ಲಾ ಆಲಿಸಿ ಪ್ರದೀಪನ ಮುಖ ಮತ್ತಷ್ಟು ಗಂಭೀರವಾಗಿತ್ತು. ನಿವೇದಿತಾ ಯಾವುದೋ ಸಂಕೀರ್ಣ ಸಮಸ್ಯೆಯಲ್ಲಿ ಒಳಗೇ ಬಳಲುತ್ತಿದ್ದಾಳೆ! ಆ ಆಂತರಿಕ ಒತ್ತಡ ವಿಪರೀತವಾಗಿ ಹತ್ತಿಕ್ಕಿಕೊಳ್ಳಲಾಗದೇ, ಅವಳ ತಾಳಿಕೆಯ ಮಿತಿ ಮೀರಿದಾಗಲೆಲ್ಲಾ ಬಹುಶಃ ಹೀಗೆ ವರ್ತಿಸುತ್ತಾಳೆಯೇ?

ಅವನು ತಿರುಗಿ ಟೆರೇಸ್‌ನ ಬಾಗಿಲ ಕಡೆ ನೋಡಿದಾಗಲೂ ಆ ಬಾಗಿಲು ಮುಚ್ಚೇ ಇತ್ತು. ಬಹುಶಃ ನಿವಿಯ ಮನಸ್ಸು ಕೂಡಾ ಹೀಗೇ ಮುಚ್ಚಿದೆ. ಅದರೊಳಗೆ ಏನಿದೆ ಎಂದು ತನಗೂ ತಿಳಿದಿಲ್ಲ. ಬಾಗಿಲು ತೆರೆದು ಬೆಳಕು ಹರಿಸಿದಾಗ ಅಲ್ಲಿ ಒಳಗೇ ಕತ್ತಲಲ್ಲಿ ಹುದುಗಿದ್ದ ಸತ್ಯಗಳು ಆಚೆ ಬರಬಹುದು. ಅದರೆ ನಿವಿಗೆ ಆ ಕತ್ತಲ ಸಖ್ಯವೇ ಹಿತವಾಗಿದೆ. ಅದರೊಂದಿಗೇ ಬದುಕುವುದು ರೂಢಿಯಾಗಿದೆ. ಅದರಿಂದ ಆಚೆ ಬರದೇ ಒಳಗೇ ಉಸಿರುಗಟ್ಟಿ ಬಳಲುತ್ತಿದ್ದಾಳೆ. ಆ ಸತ್ಯ ಹೊರಗೆ ಬಂದರೆ ಆಕೆ ನಿರಾಳವಾಗಬಹುದು. ಈ ತಳಮಳ, ತಲ್ಲಣಗಳು, ಉಸಿರುಗಟ್ಟಿದ ಸ್ಥಿತಿಯಿಂದ ಆಕೆ ಬಿಡುಗಡೆ ಹೊಂದಬಹುದು. ಹಗುರವಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಸಹಜವಾಗಿ ಬದುಕಬಹುದು!'

ಅವನು ಚಿಂತಾಮಗ್ನನಾಗಿ ಕೆಳಗಿಳಿದು ಬಂದಾಗ ಕೃತ್ತಿಕಾ ಅವನೆಡೆಗೆ ತಿರುಗಿ ನುಡಿದಳು, 'ನೀವು ಸೈಕಾಲಜಿಸ್ಟ್ ಅನ್ನು ನೋಡಿದ್ರಾ?'

'ಹೌದು. ಸೆಷನ್ ಜಾರಿಯಲ್ಲಿದೆ, ಎರಡು ಆಗಿವೆ. ನಿವಿಗೆ ನಾಳೆ ಅಪಾಯಿಂಟ್‌ಮೆಂಟ್ ಇದೆ' ಎಂದ.

'ಸರಿ. ಬೇಕಾದರೆ ವೀಣಕ್ಕನ ಹತ್ರ ಮಾತನಾಡಿ. ನಿವಿಯ ಬಗ್ಗೆ ಇನ್ನಷ್ಟು ಇನ್‌ಪುಟ್ಸ್ ಸಿಗುತ್ತೆ. ನಿಮಗೆ ಸಹಾಯ ಆಗಬಹುದು' ಎಂದಳು.

'ಆದರೆ' ಪ್ರದೀಪ ರಾಗವೆಳೆದ.

'ಅವರಿಗೆ ನನ್ನ ಮೇಲೇನೆ ಅಪನಂಬಿಕೆ ಹುಟ್ಟಿದೆ. ಇನ್ನು ಸಮಸ್ಯೆ ಅವರ ಮಗಳಲ್ಲಿದೆ ಎಂದರೆ ಆಕೆಯ ಹೆತ್ತವರು ಒಪ್ತಾರಾ? ನನಗೇನೋ ಅವರು ಸಹಕರಿಸುತ್ತಾರೆ ಎನ್ನುವುದೇ ಅನುಮಾನ. ಅದರ ಬದಲು ಅವರನ್ನು ನಾವು ನೇರವಾಗಿ ಒಮ್ಮೆ ಸೈಕಾಲಜಿಸ್ಟ್ ಹತ್ತಿರವೇ ಕರೆದೊಯ್ದು ಆಕೆಯ ಸಮ್ಮುಖದಲ್ಲಿ ಕುಳ್ಳಿರಿಸಿದರೆ ಸೂಕ್ತವೇನೋ ಎಂದು ನನ್ನ ಅಭಿಪ್ರಾಯ. ಆದರೆ ಇದಕ್ಕೆ ಆಕೆಯನ್ನು ಸಿದ್ಧಪಡಿಸುವುದು ಹೇಗೆ?'

'ನೋಡೋಣ. ನಾನು ಮಾತನಾಡಿ ನೋಡ್ತೀನಿ' ಎಂದಳು ಕೃತ್ತಿಕಾ. ಅಷ್ಟರಲ್ಲಿ ಅಲ್ಲಿಗೆ ವೀಣಮ್ಮ ಮತ್ತೆ ಸುಳಿದರು.

'ನಿವಿ ಇನ್ನೂ ಬಂದಿಲ್ವಾ?' ಎಂದಾಗ ಕೃತ್ತಿಕಾ ಅರ್ಥಗರ್ಭಿತವಾಗಿ ಪ್ರದೀಪನ ಕಡೆಗೆ ನೋಡಿದಳು. ಅವನೂ ಗಂಭೀರವದನನಾಗಿ ನಿಂತ. ಅವರಿಬ್ಬರ ತಟಸ್ಥ ನಿಲುವು ಕಂಡು ವೀಣಮ್ಮ ಆತಂಕದಿಂದ 'ಏನಾಯಿತೇ? ಮತ್ತೇನಾದರೂ ತೊಂದರೇನಾ?' ಎಂದರು ಕಳವಳದಿಂದ.

'ನಿನ್ನ ಮಗ್ಳು ಟೆರೇಸ್‌ಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾಳೆ. ಈಗೇನಂತೀ? ಅಳಿಯನ ಮೇಲೆ ಅನುಮಾನಪಡುವ ನೀನು, ಈಗ ಸತ್ಯವನ್ನು ನಿನ್ನ ಕಣ್ಣಾರೆ ನೋಡು' ಎಂದಳು.

ವೀಣಮ್ಮ ಹೋಗಿ ಟೆರೇಸ್‌ನ ಬಾಗಿಲು ಬಡಿದರೂ ನಿವಿ ಕದ ತೆರೆಯಲಿಲ್ಲ. ಆಕೆ ಸೋತು ಹಿಂತಿರುಗಿ ಬಂದು ಪೆಚ್ಚುಮೋರೆ ಹಾಕಿ ನಿಂತುಕೊಂಡರು.

'ಈಗೇನು ಮಾಡೋದು? ಇವ್ಳು ಯಾಕೆ ಹೀಗೆ ವಿಚಿತ್ರವಾಗಿ ಆಡುತ್ತಿದ್ದಾಳೆ. ನನಗೇಕೋ